ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರ
ಅಹಲ್ಯಾಬಾಯಿ ಸ್ನಾತಕೋತ್ತರ ಮಹಿಳಾ ಅಧ್ಯಯನ ಮತ್ತು ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರ

ಕೃಷಿಯಲ್ಲಿ ಮಹಿಳೆಯರ ಜ್ಞಾನ : ಒಂದು ಸ್ತ್ರೀವಾದಿ ಅಧ್ಯಯನ

ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ ವಿಜಯಪುರ ಅಹಲ್ಯಾಬಾಯಿ ಸ್ನಾತಕೋತ್ತರ ಮಹಿಳಾ ಅಧ್ಯಯನ, ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರದ ಡಾಕ್ಟರ್ ಆಫ್ ಫಿಲಾಸಫಿ (ಪಿ.ಎಚ್.ಡಿ) ಪದವಿಗಾಗಿ ಸಲ್ಲಿಸಿದ ಮಹಾ ಪ್ರಬಂಧದ ಸಾರಲೇಖ.

ಸಂಶೋಧನಾ ವಿದ್ಯಾರ್ಥಿನಿ

ಶ್ರುತಿ ತಳವಾರ

ಅಹಲ್ಯಾಬಾಯಿ ಸ್ನಾತಕೋತ್ತರ ಮಹಿಳಾ ಅಧ್ಯಯನ

ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರ

ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ ವಿಜಯಪುರ

ಮಾರ್ಗದರ್ಶಕರು

ಪ್ರೊ. ಆರ್. ಸುನಂದಮ್ಮ

ಅಹಲ್ಯಾಬಾಯಿ ಸ್ನಾತಕೋತ್ತರ ಮಹಿಳಾ ಅಧ್ಯಯನ

ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರ

ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ ವಿಜಯಪುರ

ಕೃಷಿಯಲ್ಲಿ ಮಹಿಳೆಯರ ಜ್ಞಾನ : ಒಂದು ಸ್ತ್ರೀವಾದಿ ಅಧ್ಯಯನ

ಪೀಠಿಕೆ :

ಕೃಷಿ ಮತ್ತು ಹೆಣ್ಣಿನ ಸಂಬಂಧ ಹುಟ್ಟಿನಿಂದ ಬಂದದ್ದು. ಹೆಣ್ಣಿನ ಹುಟ್ಟೆಂದರೆ ಅದು ಪ್ರಕೃತಿಯ ಹುಟ್ಟು.ಹೆಣ್ಣನ್ನು ಪ್ರಕೃತಿಗೆ, ಭೂ ಮಾತೆಗೆ, ನದಿಗಳಿಗೆ ಹೋಲಿಸುವುದರಿಂದ ಹೆಣ್ಣು ಮತ್ತು ಮಣ್ಣು ಬೇರೆ ಬೇರೆ ಅಲ್ಲ. ಇದು ಜನ್ಮದ ನಂಟು ಇಬ್ಬರೂ ಹುಟ್ಟಿಗೆ ಕಾರಣವಾಗುವವರು;ಕೊಡುವವರು;ಬೆಳೆಸುವವರು. ಭೂಮಿ ಪ್ರಕೃತಿಯಾದರೆ ಕೃಷಿ ಸಂಸ್ಕೃತಿ ಪ್ರಕೃತಿಯನ್ನು ಸಂಸ್ಕೃತಿಗೆ ತರಬೇಕಾದರೆ ಅದಕ್ಕೆ ಮಾನವ ಸ್ಪರ್ಶ ಬೇಕು. ಇಲ್ಲಿ ಗಂಡಸಿನ ಪಾತ್ರ ಹೆಚ್ಚು ಅನ್ನುವಂತೆ ಕಾಣಿಸಿದರೂ ಹೆಣ್ಣಿನ ತೊಡುಗುವಿಕೆ ಇಲ್ಲದೇ ಅದು ಸಾಧ್ಯವೇ ಇಲ್ಲ. ಗಂಡು ಅನಾದಿ ಕಾಲದಿಂದಲೂ ಆಹಾರಕ್ಕಾಗಿ ಬೇಟೆಯಾಡುತ್ತ ಬಂದವ. ಪ್ರಕೃತಿಯನ್ನು ಉಪಯೋಗಿಸಿಕೊಂಡು ಇರುವಲ್ಲೆಯೇ ಕೃಷಿ ಶುರು ಮಾಡಿದವಳು ಹೆಣ್ಣು.

ನಾಗರೀಕತೆಯ ಪ್ರಾರಂಭದಿಂದ ಇಂದಿನವರೆಗೂ ಕೃಷಿ ಚಟುವಟಿಕೆಗಳಲ್ಲಿ ಮಹಿಳೆಯರ ಪಾತ್ರ ಬಹುಮುಖ್ಯವಾಗಿದೆ. ಕೃಷಿಯಲ್ಲಿ ಇರುವ ಅವರ ಜ್ಞಾನ ಅಭೂತಪೂರ್ವವಾಗಿದೆ. ಬೆಳೆಯ ತಳಿಗಳ ಬಗ್ಗೆ ತಿಳುವಳಿಕೆ ಹೆಚ್ಚಿನದು. ನಮ್ಮ ದೇಶದ ಒಟ್ಟು ಜನಸಂಖ್ಯೆಯಲ್ಲಿ ಇತ್ತೀಚಿನ ಅಂದಾಜಿನ ಪ್ರಕಾರ ಸುಮಾರು ೨೦ ದಶಲಕ್ಷ ಮಹಿಳೆಯರು ಹಳ್ಳಿಗಳಲ್ಲಿ ಕೃಷಿ ಕಾರ್ಮಿಕರಾಗಿ ದುಡಿಯುತ್ತಿದ್ದಾರೆ.ಉಳಿದ ೧೧೦ದಶಲಕ್ಷ ಮಹಿಳೆಯರು ಪಶುಪಾಲನೆ ಹಾಗೂ ಇತರೆ ಉಪಕಸಬುಗಳಲ್ಲಿ ತೊಡಗಿದ್ದಾರೆ. ಕೃಷಿ ಅಭಿವೃದ್ದಿಯಲ್ಲಿ ಗ್ರಾಮೀಣ ಕೃಷಿಕ ಮಹಿಳೆಯರ ಕೊಡುಗೆ ತುಂಬಾ ಮಹತ್ವರವಾದದ್ದು. ಪ್ರತಿಶತ ೮೦ ರಷ್ಟು ಗ್ರಾಮೀಣ ಮಹಿಳೆಯರು ಕೃಷಿ ಚಟುವಟಿಕೆಗಳಲ್ಲಿ ಭಾಗವಹಿಸುತ್ತಿದ್ದಾರೆ. ಹೊಲದಲ್ಲಿ ಬೀಜ ಬಿತ್ತನೆ,ಸಸಿ ನಾಟಿ ಮಾಡುವುದರಿಂದ ಹಿಡಿದುಕಳೆ ತೆಗೆಯುವುದು,ಗೊಬ್ಬರ ಹಾಕುವುದು, ಕಾಯಿ ಹರಿಯುವುದು,ಬೆಳೆಯ ಪಾಲನೆ, ಕಟಾವು, ಸಂಸ್ಕರಣೆ ಮತ್ತು ದಾಸ್ತಾನು ಮಾಡುವುದಲ್ಲ ಮಹಿಳೆಯರೇ ಹಿಂದಿನ ಹತ್ತಾರು ತಲೆಮಾರಿನೊಂದಿಗೆ ಬೆಸೆದುಕೊಂಡ ತಳಿಗಳನ್ನು ಉಳಿಸಿಕೊಂಡು,ಮುಂದಿನತಲೆಮಾರಿಗೆ ಉಳಿಸಿ ಇಡುವ ಮನಸ್ಸು ಮಹಿಳೆಯರಿಗೆ ಮಾತ್ರ ಇದೆ ಎಂದು ಹೇಳಿದರೆ ತಪ್ಪಾಗಲಾರದು. ಸಾಮಾನ್ಯವಾಗಿ ಯಾವುದೇ ಬೆಳೆಯ ನಾಟಿ ತಳಿಗಳನ್ನು, ಆಯಾ ಬೆಳೆ ಮತ್ತು ಫಸಲುಗಳ ಗಾತ್ರ, ಆಕಾರ, ಬಣ್ಣ, ವಾಸನೆಗಳ ಆಧಾರದಲ್ಲಿ ಗುರುತಿಸುವ ಮತ್ತು ಹೆಸರಿಸುವ ಜ್ಞಾನ ಇರುವುದು ಗ್ರಾಮೀಣ ರೈತ ಮಹಿಳೆಯರಿಗೆ ಮಾತ್ರ ಸಾಧ್ಯ. ಏಕೇಂದರೆ ಈ ವರ್ಷ ಯಾವ ಬೀಜ ಹಾಕಿ ಮುಂದಿನ ವರ್ಷಕ್ಕೆ ಯಾವ ಬೆಳೆ ಬೆಳೆಯಬೇಕು? ಎಷ್ಟು ಹಾಕಬೇಕು ಎಂಬುದೆಲ್ಲ ನಮ್ಮ ಅಜ್ಜಿಯಂದಿರು ಹೊಲಕ್ಕೆ ಹೋಗಿ ನೋಡಿ, ಲೆಕ್ಕ ಹಾಕುತ್ತಿದ್ದರು. ಈಗಲೂ ಅದೇ ಜ್ಞಾನವನ್ನು ಮುಂದುವರಿಸಿದ್ದರೆ ಖಂಡಿತವಾಗಿಯೂ ಗ್ರಾಮೀಣ ಕೃಷಿಕ ಮಹಿಳೆ ಬೀಜ ವಿಜ್ಞಾನಿಯಾಗುತ್ತಿದ್ದಳು. ಆದರೇ ಇಂಥವನ್ನು ಗಣನೆಗೇ ತೆಗೆದುಕೊಳ್ಳುತ್ತಿಲ್ಲ. ಭಾರತದ ಮಟ್ಟಿಗೆ ಹೇಳುವುದಾದರೆ ಕೃಷಿಯನ್ನು ಬಿಟ್ಟು ಮಹಿಳೆ ಇಲ್ಲ ಆಹಾರ ಒಂದು ಸಂಸ್ಕೃತಿ, ಕೃಷಿ ಒಂದು ಸಂಸ್ಕೃತಿ ಆಹಾರ ಭದ್ರತೆಯ ಕೀಲಿ ಕೈ ಮಹಿಳೆಯೇ ಆಗಿದ್ದಾಳೆ. ಹೊರಗಡೆಯಿಂದ ತಂದು ಹಾಕುವುದು ಪುರುಷನ ಕೆಲಸವಾದರೆ ಅದನ್ನು ಒಪ್ಪವಾಗಿರಿಸಿ, ಭದ್ರವಾಗಿಸಿದ್ದು ಮಹಿಳೆ. ಬೀಜಗಳನ್ನು ಅಕ್ಕಪಕ್ಕದ ನೆಂಟರಿಷ್ಟರ ಬಳಿಯೇ ತೆಗೆದುಕೊಳ್ಳುತ್ತಿದ್ದಳು,ಅಂದರೇ ಖರ್ಚಿಲ್ಲದೆ ಬೀಜ ತರುತ್ತಿದ್ದಳು, ಖರ್ಚಿಲ್ಲದೆ ಬೆಳೆ ಬೆಳೆಯುತ್ತಿದ್ದಳು ಕೂಡ. ಅವಳು ಬೆಳೆಯುವ ಬೆಳೆಗೆ ಯಾವುದೇ ರೀತಿಯ ರಾಸಾಯನಿಕಗಳನ್ನೂ ಬಳಸುತ್ತಿರಲಿಲ್ಲ ಅದನ್ನೆಲ್ಲ ಬಳಸಲು ಅವಳಲ್ಲಿ ದುಡ್ಡು ಇರುತ್ತಿರಲಿಲ್ಲ ಅವಳದ್ದೇನಿದ್ದರೂ ಖರ್ಚಿಲ್ಲದ ವ್ಯವಸಾಯ ಹಾಗಾಗಿ

ಕೊಟ್ಟಿಗೆಯಲ್ಲಿರುವ ಸಗಣಿ ಗೊಬ್ಬರ, ಒಲೆಯಲ್ಲಿನ ಬೂದಿ ಇವನ್ನೇ ಅವಳು ಬೆಳೆಯುವ ಬೆಳೆಗೆ ಬಳಸುತ್ತಿದ್ದಳು. ಇವುಗಳಂದಲೇ ಬೆಳೆಗಳೂ ಸೂಂಪಾಗಿ ಬೆಳೆಯುತ್ತಿದ್ದವು. ಇವತ್ತು ಸಾವಯವ ಕೃಷಿ ಎಂಬುದಕ್ಕೆ ವ್ಯಾಪಕವಾದ ಪ್ರಚಾರ ಸಿಗುತ್ತಿದೆ, ಇದೊಂದು ಪ್ಯಾಷನ ಆಗಿದೆ. ಇದನ್ನೆಲ್ಲ ಸಾವಿರಾರು ವರ್ಷಗಳ ಹಿಂದೆಯೇ ನಮ್ಮ ಮಹಿಳೆಯರು ಪಾಲಿಸುತ್ತ ಬಂದಿದ್ದರು. ಹಾಗಾಗಿ ಇಂದೇನಾದರೂ ಸಾವಯವ ಕೃಷಿಯೆಂಬುದು ನಮ್ಮಲ್ಲಿ ಉಳಿದಿದ್ದರೆ ಅದಕ್ಕೆ ಮಹಿಳೆಯ ಕೊಡುಗೆ ಅಪಾರ. ಆದರೆ ನಮ್ಮಲ್ಲಿ ಕೃಷಿಯನ್ನು ಪ್ರತ್ಯೇಕವಾಗಿ ನಿಂತು ಮಾಡಿದ ಮಹಿಳೆಯರ ಉದಾಹರಣೆ ಸಿಗುವುದು ಕಷ್ಟ. ಕಾರಣ ಅವಳದ್ದೇ ಹೆಸರಿನಲ್ಲಿ ಜಮೀನು ಇರುವುದಿಲ್ಲ ಹಾಗಾಗಿ ಮಹಿಳೆ ಸದಾ ಗಂಡನಿಗೆ ಬೆನ್ನೆಲುಬಾಗಿ ನಿಂತಳು. ಇಂದು ಮಿಶ್ರಬೆಳೆಗಳಿಗೆಲ್ಲ ಕಾರಣಳೇ ಮಹಿಳೆ. ಗಂಡ ಬೆಳೆಯುವ ದೊಡ್ಡ ದೊಡ್ಡ ಬೆಳೆಗಳಿಗೆ ಉಪಬೆಳೆಯಾಗಿ ತನಗೆ ಬೇಕಾದ ಬೆಳೆಯನ್ನು ಬೆಳೆಯುತ್ತಿದ್ದಳು. ಆದರೆ ಅವಳ ಜ್ಞಾನವನ್ನು ಪರಿಗಣಿಗೆ ತೆಗೆದುಕೊಳ್ಳದಿರುವ ಕಾರಣಕ್ಕಾಗಿ ಇಂದು ಇಷ್ಟೆಲ್ಲ ಅನಾಹುತಗಳು ಸಂಭವಿಸುತ್ತವೆ ಎನ್ನಲಾಗುತ್ತಿದೆ. ಇದನ್ನೇ ಖ್ಯಾತ ಪರಿಸರವಾದಿ ಡಾ.ವಂದನಾ ಶಿವ ಅವರು ಹೇಳಿದ್ದು.

ಭಾರತದಂತಹ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಕೃಷಿಕ ಮಹಿಳೆಯರ ಪಾತ್ರ ಅತೀ ಮುಖ್ಯವಾದ ಪಾತ್ರ ವಹಿಸುತ್ತದೆ. ತಮ್ಮ ಹಿಂದಿನ ತಲೆಮಾರುಗಳಿಂದ ಪಾರಂಪರಿಕವಾಗಿ ಬಂದ ಅವರ ಜ್ಞಾನದ ಅರಿವು ಎಲ್ಲೂ ಕೊಡ ದಾಖಲುಗೊಂಡಿದ್ದೇ ಇಲ್ಲ.ಕುಟುಂಬಕ್ಕೆ ಬೇಕಾಗುವ ಪೌಷ್ಠಿಕಾಂಶ,ಮಗುವಿನ ಆರೈಕೆ, ಆಹಾರ ಪೂರೈಸುವ ಜವಾಬ್ದಾರಿಗಳನ್ನು ನಿರ್ವಹಿಸುವಾಗ ಕೃಷಿ ಚಟುವಟಿಕೆಗಳಲ್ಲಿ ತೊಡಗಿಕೊಳ್ಳುವ ಅನಿವಾರ್ಯವು ಹೌದು. ‘ಹಸಿದ ಹೊಟ್ಟೆಗೆ ಅನ್ನವನ್ನು ನೀಡುವವಳು ಭೂಮಿ ತಾಯಿ, ದಣಿದಾಗ ನೀರನ್ನು ನೀಡಿ ದಾಹವನ್ನು ತಣಿಸಿದವಳು ಭೂಮಿ ತಾಯಿ, ಜನನದಿಂದ ಹಿಡಿದು ವೃದ್ಧಾಪ್ಯದವರೆಗೊ ನಮ್ಮನ್ನು ಹೊರುವಳು ಭೂಮಿ ತಾಯಿ,ಕೊನೆಗೆ ಉಸಿರು ನಿಂತಾಗ ತನ್ನಲ್ಲಿ ಬಚ್ಚಿಟ್ಟುಕ್ಕೊಂಡು ನಮ್ಮ ಜೀವನಕ್ಕೆ ಒಂದು ಅರ್ಥ ನೀಡುವಳು ಭೂಮಿ ತಾಯಿ. ಇಂತಹ ನಿಸ್ವಾರ್ಥ ಸೇವೆಯನ್ನು ಮರೆತ ನಾವು ದುರಾಸೆಗೆ ಬಲಿಯಾಗಿ ಪ್ರಕೃತಿ ಮಾತೆಯ ಒಡಲಿಗೆ ವಿಷ ಉಣಿಸುವ ಕೆಲಸ ಮಾಡುತ್ತಿದ್ದೇವೆ. ೧೯೫೦ ಮತ್ತು ೬೦ ದಶಕದಲ್ಲಿ ಭಾರತ ದೇಶದಲ್ಲಿ ಜನಸಂಖ್ಯೆ ಹಾಗೂ ನೈಸರ್ಗಿಕ ವಿಕೋಪಗಳಿಂದಾಗಿ ಆಹಾರದ ಕೊರತೆಯನ್ನು ನೀಗಿಸುವ ಸಲುವಾಗಿ ಶುರುವಾಗಿದ್ದೇ ಹಸಿರು ಕ್ರಾಂತಿ. ೧೯೬೦ರಲ್ಲಿ ಭಾರತ ಸರ್ಕಾರವು ಹಸಿರು ಕ್ರಾಂತಿಗೆ ತುಂಬಾನೇ ಪ್ರಾಮುಖ್ಯತೆ ನೀಡಿತು. ಹೈಬ್ರಿಡ್ ತಳಿಗಳನ್ನು ಪರಿಚಯಸಲಾಯಿತು, ಸಹಜ, ಸಾವಯವ. ಗೊಬ್ಬರಗಳನ್ನು ತರಲಾಯಿತು. ಸಾವಯವ ಕೀಟನಾಶಕಗಳ ಬದಲಿಗೆ ರಾಸಾಯನಿಕ ಕೀಟನಾಶಕಗಳನ್ನು ಬಳಸಲಾಯಿತು.

೭೦ ರ ದಶಕದಲ್ಲಿ ಲಕ್ಷಲಕ್ಷ ಬಡ ಜನ ಹಸಿವಿನಿಂದ ಸತ್ತರು. ಇಂಥ ಸಮಯದಲ್ಲಿ ಬಂದಂಥ ಹಸಿರು ಕ್ರಾಂತಿ, ಕೆಲವೇ ವರ್ಷಗಳಲ್ಲಿ ಅತಿಯಾದ ರಾಸಾನಿಕಗಳನ್ನು ಬಳಸಿ ಕೃಷಿ ಮಾಡಿದ್ದರಿಂದ ಸಾಕಷ್ಟು ಅಪಾಯಗಳು ಸಂಭವಿಸಿದವು. ರಾಸಾಯನಿಕ ಗೊಬ್ಬರಗಳನ್ನು ಹಾಕಿ ಭೂಮಿ ಎಲ್ಲಾ ಬರಡಾಗಿ ಮಣ್ಣು ಫಲವತ್ತತೆಯನ್ನು ಕಳೆದುಕೊಳ್ಳುತ್ತಾ ಬಂದಿತು ಇದರಿಂದ ಕೃಷಿಗೆ ಖರ್ಚು ವೆಚ್ಚಗಳು ಜಾಸ್ತಿ ಆಗಿ ರೈತರು ಸಾಲ ಮಾಡಿಕೊಂಡು ಆತ್ಮಹತ್ಯೆ ಮಾಡಿಕೊಳ್ಳುವ ಪರಿಸ್ಥಿತಿ ಬಂದಿತು. ಇದರಿಂದ ಎಚ್ಚೆತುಕೊಳ್ಳುವ ಸಲುವಾಗಿ ಮಹಿಳೆಯರು ರೂಢಿಸಿಕೊಂಡ ಬಂದ ಸಾವಯವ ಕೃಷಿ ಪದ್ಧತಿಗೆ ಮರಳಿ ಬಂದಿದ್ದಾರೆ. ಜಗತ್ತಿನಾದ್ಯಂತ ೧೭೯ ದೇಶಗಳು ಸಾವಯವ ಕೃಷಿಯಲ್ಲಿ ತೊಡಗಿಸಿಕೊಂಡಿದ್ದಾರೆ ಎಂದು ೨೦೧೭ ರ “ದ ವರ್ಡ್ ಆಫ್ ಆರಗಾನಿಕ್ ಅಗ್ರಿಕಲ್ಚರ್” ಜರ್ನಲ್‌ನಲ್ಲಿ ಪ್ರಕಟವಾಗಿದೆ.

ಅಧ್ಯಯನದ ಉದ್ದೇಶಗಳು :

೧. ಕೃಷಿಯ ಕುರಿತು ಮಹಿಳೆಯರಿಗಿರುವ ವಿಭಿನ್ನವಾದ ಜ್ಞಾನದ ಕುರಿತು ಅಭ್ಯಸಿಸುವುದು

೨. ಕೃಷಿಕ ಮಹಿಳೆಯರ ಜೀವನ ಕ್ರಮವನ್ನು ಅಧ್ಯಯನ ಮಾಡುವ ಮೂಲಕ ಸಮಾಜದ ಮುಖ್ಯವಾಹಿನಿಯಿಂದ ಅವರು ಹೇಗೆ ಭಿನ್ನವಾಗಿದ್ದಾರೆಂಬುದನ್ನು ಅಭ್ಯಸಿಸುವುದು

೩. ಸಾವಯವ ಕೃಷಿಯಲ್ಲಿ ಮಹಿಳೆಯರ ಪಾತ್ರದ ಕುರಿತು ತಿಳಿಯುವುದು

ಅಧ್ಯಯನದ ವೈಧಾನಿಕತೆ :

ಪ್ರಸ್ತುತ ಅಧ್ಯಯನದ ವಿಷಯವಾದ "ಕೃಷಿಯಲ್ಲಿ ಮಹಿಳೆಯರ ಜ್ಞಾನ ; ಒಂದು ಸ್ತ್ರೀವಾದಿ ಅಧ್ಯಯನ" ಈ ಅಧ್ಯಯನದಲ್ಲಿ ಸ್ತ್ರೀವಾದಿ ಸಂಶೋಧನಾ ವಿಧಾನಕ್ಕೆ ಹೆಚ್ಚಿನ ಆದ್ಯತೆಯನ್ನು ನೀಡಲಾಗುವುದು ಏಕೆಂದರೆ ಸ್ತ್ರೀವಾದಿ ವಿಧಾನವು ಸ್ತ್ರೀ ಕೇಂದ್ರಿತವಾಗಿದ್ದು ಸ್ತ್ರೀವಾದಿ ದೃಷ್ಟಿಕೋನವನ್ನು ಹೊಂದಿರುತ್ತದೆ. ಹಾಗೂ ಸ್ತ್ರೀಯರ ನಿಜಸ್ಥಿತಿಯನ್ನು ತಿಳಿದು ಅವರ ಜೀವನವನ್ನು ಮತ್ತು ಅವರ ಜ್ಞಾನವನ್ನು ಸರಿಯಾಗಿ ಚಿತ್ರೀಸುವುದು ಹಾಗೂ ತೋರಿಸುವುದು ಸ್ತ್ರೀವಾದಿ ಸಂಶೋಧನಾ ವಿಧಾನವು ಮಹಿಳಾ ವಿಷಯಗಳ ವಾಸ್ತವಿಕತೆಯನ್ನು ಹೊರತರಲು ಪ್ರಯತ್ನಿಸುತ್ತದೆ. ಈ ಅಧ್ಯಯನವು ಕ್ಷೇತ್ರ ಕಾರ್ಯವನ್ನು ಅವಲಂಬಿಸಿರುವುದರಿಂದ ವಕ್ತರುಗಳು ನೀಡಿದ ಮಾಹಿತಿಯನ್ನು ಸ್ತ್ರೀವಾದಿ ದೃಷ್ಟಿಕೋನದಿಂದ ವಿಶ್ಲೇಷಣೆ ಮಾಡಲಾಗಿದ್ದು ಈ ಅಧ್ಯಯನಕ್ಕೆ ಸ್ತ್ರೀವಾದಿ ಸಂಶೋಧನಾ ವಿಧಾನವನ್ನು ಅಳವಡಿಸಿಕೊಳ್ಳಲಾಗಿದೆ ಮತ್ತು ಗುಣಾತ್ಮಕ ವಿಧಾನದ ಮೂಲಕ ಹಾಗೂ ಪ್ರಶ್ನಾವಳಿಯ ಮೂಲಕ ಮಾಹಿತಿಯನ್ನು ಸಂಗ್ರಹಿಸಲಾಗಿದೆ.

ಅಧ್ಯಯನದ ವ್ಯಾಪ್ತಿ :

ಕರ್ನಾಟಕ ರಾಜ್ಯದ ಐತಿಹಾಸಿಕ ನಗರಿ ಹಾಗೂ ಗುಮ್ಮಟ ನಗರಿ ಎಂದು ಕರೆಸಿಕೊಂಡಿರುವ ವಿಜಯಪುರ ಜಿಲ್ಲೆಯ ಪ್ರಮುಖ ಉದ್ಯೋಗವೇ ಕೃಷಿಯಾಗಿದೆ. ಈ ಕ್ಷೇತ್ರದಲ್ಲಿ ಸುಮಾರು ೭೫% ಜನರು ಕೆಲಸ ಮಾಡುತ್ತಾರೆ. ಜಿಲ್ಲೆಯಲ್ಲಿ ಕೇವಲ ೧೫% ಭೂಮಿ ಮಾತ್ರ ನೀರಾವರಿ ಹೊಂದಿದೆ. ಉಳಿದ ೮೫% ಭೂಮಿ ಮಳೆಯನ್ನೇ ಅವಲಂಬಿಸಿದೆ. ಒಟ್ಟು ಪ್ರದೇಶ ೧೦.೫೩೪೭೧ ಹೆಕ್ಟರ್, ಕೃಷಿಯೊಗ್ಯ ಭೂಮಿ ೭.೮೭೫೯೩ ಹೆಕ್ಟರ್, ಕಾಡು ಪ್ರದೇಶ ೧.೯೭೭ ಹೆಕ್ಟರ್, ಕೃಷಿಯೊಗ್ಯವಲ್ಲದ ಭೂಮಿ ೧೬.೩೮೩ ಹೆಕ್ಟರ್, ಕೃಷಿಗೆ ಲಭ್ಯವಿಲ್ಲದ ಭೂಮಿ ೬೪.೯೦೬ ಹೆಕ್ಟರ್, ಪಾಳು ಭೂಮಿ ೨.೫೨.೯೫೨ ಹೆಕ್ಟರ್ ಹೊಂದಿದೆ.

ಅಧ್ಯಯನದ ಇತಿಮಿತಿಗಳು :

೧. ಈ ಅಧ್ಯಯನವು ಕೇವಲ ಕೃಷಿಕ ಮಹಿಳೆಯರಿಗೆ ಸಂಬಂಧಿಸಿದ್ದಾಗಿದೆ

೨. ಈ ಅಧ್ಯಯನವು ವಿಜಯಪುರ ಜಿಲ್ಲೆಯ ೫ ತಾಲೂಕುಗಳಿಗೆ ಮಾತ್ರ ಸಂಬಂಧಿಸಿದಾಗಿದೆ
೩. ಈ ಅಧ್ಯಯನವು ೨೫೦ ಜನ ಕೃಷಿಕ ಮಹಿಳೆಯರಿಗೆ ಮಾತ್ರ ಸಂಬಂಧಿಸಿದ್ದಾಗಿದೆ

ಅಧ್ಯಯನದ ಮಹತ್ವ :

ಭಾರತಿಯ ಸಮಾಜದಲ್ಲಿ ಪ್ರಾಚೀನ ಕಾಲದಿಂದಲೂ ಹಿಡಿದು ಆಧುನಿಕ ಕಾಲದವರೆಗೂ ಮಹಿಳೆಯರು ಅನೇಕ ಸಮಸ್ಯೆಗಳನ್ನು ಎದುರಸುತ್ತಾ ಬಂದಿದ್ದಾರೆ. ದಿನವಿಡೀ ಕಷ್ಟಪಟ್ಟು ದುಡಿಯುವ ಶ್ರಮಜೀವಿಗಳು ಎಂದರೆ ಅದು ಗ್ರಾಮೀಣ ಕೃಷಿಕ ಮಹಿಳೆಯರು. ಕೃಷಿ ಕೆಲಸದ ಜೊತೆಗೆ ಕುಟುಂಬದ ನಿರ್ವಹಣೆಯನ್ನು ನಿಭಾಯಿಸುತ್ತಾರೆ. ಪುರುಷನಷ್ಟೆ ಸರಿಸಮಾನವಾಗಿ ದುಡಿದರು ಸಹ ಯಾವುದೇ ರೀತಿಯ ಗೌರವ, ಸ್ಥಾನಮಾನ ಸಿಗುವುದಿಲ್ಲ. ಕೃಷಿಕ ಮಹಿಳೆಯರು ಸಮಾಜದ ಮುಖ್ಯವಾಹಿನಿಯಿಂದ ದೂರ ಇದ್ದು ಹೇಗೆ ತಮ್ಮ ಬದುಕನ್ನು ನಡೆಸುತ್ತಿದ್ದಾರೆ? ಪಿತೃಪ್ರದಾನ ವ್ಯವಸ್ಥೆಯು ಸಂಪ್ರದಾಯ ಆಚರಣೆಗಳು ಮಹಿಳೆಯರ ಮೇಲೆ ಹೇಗೆಲ್ಲ ಪ್ರಭಾವ ಬೀರಿವೆ ಹಾಗೂ ಸಾಮಾಜಿಕವಾಗಿ, ಆರ್ಥಿಕವಾಗಿ, ಅವರ ಆರೋಗ್ಯ ಸ್ಥಿತಿಗತಿ ಕುರಿತು ಅವರವರ ಕುಟುಂಬಗಳಲ್ಲಿ ನಿರ್ಲಕ್ಷಕ್ಕೆ ಒಳಗಾಗಿದ್ದಾರೆ ಎಂಬ ವಾಸ್ತವ ಚಿತ್ರಣ ದೊರೆಯಬೇಕಾಗಿದೆ ಹಾಗಾಗೀ ಸಂಶೋಧನೆ ನಡೆಸಿದ್ದಲ್ಲಿ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಚಿತ್ರಣ ದೊರೆಯುತ್ತದೆ. ಆದ್ದರಿಂದ ಪ್ರಸ್ತುತ ಅಧ್ಯಯನವು ಮಹತ್ವ ಪಡೆಯುತ್ತದೆ.

ಉಪಸಂಹಾರ :

ಒಟ್ಟಾರೆಯಾಗಿ ಪ್ರಸ್ತುತ ಸಂಶೋಧನಾ ಅಧ್ಯಯನದಲ್ಲಿ ಗ್ರಾಮೀಣ ಕೃಷಿಕ ಮಹಿಳೆಯರು ಕೃಷಿ ಚಟುವಟಿಕೆಗಳಲ್ಲಿ ಶೇ.೯೦% ತೊಡಗಿಸಿಕೊಂಡಿದ್ದಾರೆ. ಕೃಷಿಯಲ್ಲಿ ಮಾತ್ರವಲ್ಲ ಆಹಾರ ಉತ್ಪನ್ನಗಳನ್ನು ಸಂಸ್ಕರಣೆ ಮಾಡುವಲ್ಲಿಯೂ ಮಹಿಳೆಯರ ಪಾತ್ರ ಬಹುದೊಡ್ಡದು. ಆದರೆ ಇಂದು ನಾವು ಕೃಷಿಯಲ್ಲಿ ರಾಸಾಯನಿಕಗಳನ್ನು ಬಳಸಿ ಭೂಮಿಯನ್ನು ಬರಡು ಮಾಡುತ್ತಿದ್ದೆವೆ. ಮಣ್ಣು ತನ್ನ ಸತ್ವವನ್ನು ಕಳೆದುಕೊಂಡು ಯಾವುದೇ ತರ ಆಹಾರ ಬೆಳೆ ಬೆಳಯಲಾಗುತ್ತಿಲ್ಲ. ಹಾಗಾಗಿ ಆಹಾರ ಭದ್ರತೆ ಇರದ ಕಾರಣಕ್ಕಾಗಿಯೇ ನಮ್ಮಲ್ಲಿ ಹಸಿರು ಕ್ರಾಂತಿ ಬಂತು. ಆದರೆ ಆಗಿನಿಂದ ಈಗಿನವರೆಗೂ ಕೃಷಿ ಯೋಜನೆಗಳಲ್ಲಿ ಮಹಿಳೆಯರ ಜ್ಞಾನವನ್ನು ಸರಿಯಾಗಿ ಬಳಸಿಕೊಂಡ ಉದಾಹರಣೆ ನಮ್ಮಲ್ಲಿಲ್ಲ. ಆಕೆಯ ಪಾರಂಪರಿಕ ಜ್ಞಾನವನ್ನು ಕೃಷಿಯಲ್ಲಿ ಅಳವಡಿಸಿಕೊಳ್ಳಬೇಕಾದ ಅನಿವಾರ್ಯತೆ ಇದೆ. ಹಸಿವು, ಬಡತನ, ಆರ್ಥಿಕತೆಯನ್ನು ಉತ್ತಮಪಡಿಸಲು ಗ್ರಾಮೀಣ ಮಹಿಳೆಯರಿಂದ ಮಾತ್ರ ಸಾಧ್ಯ. ಎಂತಹ ಪರಿಸ್ಥಿತಿಯಲ್ಲೂ ಅವರು ತಮ್ಮ ಬಲವನ್ನು ಕಡಿಮೆ ಮಾಡಿಕೊಳ್ಳದೇನೇ ಕೃಷಿ ಚಟುವಟಿಕೆಗಳ ತೊಡಗಿ ಯಾವ ಬೆಳೆ ಯಾವ ಋತುಮಾನದಲ್ಲಿ ಎಷ್ಟು ಹಾಕಬೇಕು ಹೇಗೆ ಸಂರಕ್ಷಣೆ ಮಾಡಬೇಕು ಎಂಬುದು ಅವರ ತಿಳುವಳಿಕೆಯಿಂದ ಬಂದಿದ್ದು. ಯಾವದೇ ರೀತಿಯ ಪುಸ್ತಕಗಳನ್ನು ಓದಿ ತಿಳಿದುಕೊಂಡವರಲ್ಲಾ ತಮ್ಮ ಅನುಭವಗಳ ಮೂಲಕ ಕಲಿತ ಜ್ಞಾನ. ಒಂದು ಉತ್ತಮ ದೇಶಕ್ಕೆ ಕೂಡುಗೆಯನ್ನು ಕೊಡುವಂತ ಶಕ್ತಿ ಇದೆ ಎಂದರೇ ಅದಕ್ಕೆ ಕೃಷಿಕ ಮಹಿಳೆಯಿಂದ ಮಾತ್ರ ಸಾಧ್ಯ. ಆದ್ದರಿಂದ ಸರ್ಕಾರವು ಅವರಿಗೂ “ರೈತ ಮಹಿಳೆ” ಎಂದು ಮಾನ್ಯತೆ ಕೊಡಬೇಕು. ಅದರಿಂದ ಅವರ ಕೆಲಸಕ್ಕೆ ಬೆಲೆ ಸಿಕ್ಕಂತೆ ಆಗುತ್ತದೆ.

ಆಧಾರ ಗ್ರಂಥಗಳು :

೧. ಭಾರತಿ ಹೆಗಡೆ 'ಮಣ್ಣಿನ ಗೆಳತಿ", ವಿಕಾಸ ಪ್ರಕಾಶನ ಬೆಂಗಳೂರು – ೨೦೧೯

೨. ಗೀತಾ ಚಿಟಗುಬ್ಬಿ ಮತ್ತು ಸರೋಜಿನಿ ಕರಕಣ್ಣವರ "ಕೃಷಿ ಮುನ್ನಡೆ", ಕೃಷಿ ವಿಶ್ವವಿದ್ಯಾಲಯ, ಧಾರವಾಡ–೨೦೦೪

೩. ಮಹಿಳೆ ಮತ್ತು ಆರ್ಥಿಕತೆ ಮತ್ತು ಅಭಿವೃದ್ದಿ, ಟಿ.ಆರ್ ಚಂದ್ರಶೇಕರ. ಕನ್ನಡ ವಿಶ್ವವಿದ್ಯಾಲಯ ಹಂಪಿ– ೨೦೦೧

೪. ಚ. ನ. ಶಂಕರ್‌ರಾವ್, ಸಾಮಾಜಿಕ ಸಂಶೋಧನೆಯ ಕೈಪಿಡಿ, ಜೈ ಭಾರತ ಪ್ರಕಾಶನ ಮಂಗಳೂರು–೨೦೧೨/೨೦೧

೫. ಎಚ್.ಎಸ್.ಶ್ರೀಮತಿ, ಸ್ತ್ರೀವಾದಿ ಸಂಶೋಧನಾ ವಿಧಿ ವಿಧಾನಗಳು. ಬರಹ ಪಬ್ಲಿಷಿಂಗ್ ಹೌಸ್, ಬೆಂಗಳೂರು–೨೦೧೨

೬. ಡಾ. ಆರ್. ಸುನಂದಮ್ಮ ಮತ್ತು ಡಾ. ಓಂಕಾರ ಕಾಕಡೆ "ಪಶು ಸಂಗೋಪನೆ", ಪ್ರಕಾಶನ ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯ, ವಿಜಾಪುರ – ೨೦೧೩

೭. ಡಾ. ಹೇಮಲತ ಎಚ್.ಎಮ್ ಮಹಿಳಾ ಅಧ್ಯಯನ=೧೧, ಐಡಿಯಲ್ ಪಬ್ಲಿಕೇಷನ್ ಮಂಡ್ಯ – ೨೦೧೯

೮. ಡಾ. ಡಿ.ಎಂ.ಮದರಿ, ಡಾ. ಬಿ. ಆರ್. ಅಂಬೇಡ್ಕರ್ ಮತ್ತು ಸಾಮಾಜಿಕ ನ್ಯಾಯ. ಪ್ರಸಾರಾಂಗ ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯ ವಿಜಯಪುರ – ೨೦೧೨

೯. ಸಂ : ಬಸವರಾಜ ಸೂಳಿಭಾವಿ "ಬಿಟಿ ಬದನೆ ಬದುಕು ಬರಿದಾಗಿಸುವ ಕುಲಾಂತರಿ", ಲಡಾಯಿ ಪ್ರಕಾಶನ ಗದಗ – ೨೦೧೦

ಸಂಶೋಧನಾ ವಿದ್ಯಾರ್ಥಿನಿ

ಶ್ರುತಿ ತಳವಾರ

ಅಹಲ್ಯಾಬಾಯಿ ಸ್ನಾತಕೋತ್ತರ ಮಹಿಳಾ ಅಧ್ಯಯನ

ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರ,

ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ

ವಿಜಯಪುರ

ಮಾರ್ಗದರ್ಶಕರು

ಪ್ರೊ. ಆರ್. ಸುನಂದಮ್ಮ

ಅಹಲ್ಯಾಬಾಯಿ ಸ್ನಾತಕೋತ್ತರ ಮಹಿಳಾ ಅಧ್ಯಯನ

ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರ,

ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ

ವಿಜಯಪುರ